ಓ.ಎಸ್.186/2023 ಡಿ.ಡಬ್ಲು-2
ವಿಶಾಲಾಕ್ಷಿ ತಂದೆ ಮಹಾಬಳೇಶ್ವರ

ದಿ.15-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ವಿ.ಪಿ.ಎಸ್.ಜೆ ವಕೀಲರಿಂದ:-**

ನಾನು 2025 ಬಿ.ಕಾಮ್ ಅನ್ನು ಎಸ್.ಎಮ್.ಎಲ್ ಕಾಲೇಜಿನಲ್ಲಿ ಮುಗಿಸಿರುತ್ತೇನೆ. ನನ್ನ ಕಾಲೇಜ್ ಫೀಸ್ ರೂ.8,500/- ಎರಡು ವರ್ಷದವರೆಗೆ ಇತ್ತು. ಇನ್ನೊಂದು ವರ್ಷ ಎಷ್ಟು ಫೀಸ್ ಕಟ್ಟಿರುತ್ತೇನೆ ಎಂದು ನನಗೆ ನೆನಪಿಲ್ಲ. 3 ವರ್ಷದ ವಿದ್ಯಾಭ್ಯಾಸಕ್ಕಾಗಿ ಒಟ್ಟು ರೂ.50,000/- ಆಗಿರುತ್ತದೆ. ನನ್ನ ಕಾಲೇಜ್ ಫೀಸ್ ಕಟ್ಟಿದ ಬಗ್ಗೆ ರಸೀದಿಗಳನ್ನು ಹಾಜರು ಪಡಿಸಿರುವುದಿಲ್ಲ. ನಮ್ಮ ತಂದೆ ಕ್ಯಾನ್ಸರ್ ಕಾಯಿಲೆಯಿಂದ ಬಳಲಿದ್ದು ಅವರಿಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ರಸೀದಿಗಳನ್ನು ಹಾಜರು ಪಡಿಸಿರುತ್ತೇವೆ. ನಮ್ಮ ತಂದೆಯ ಚಿಕಿತ್ಸೆಗಾಗಿ 3 ಲಕ್ಷ ಸಾಲ ಮಾಡಿದ್ದು ಎಂದು ಹೇಳಿದ್ದು ನನ್ನ ಹೆಸರಿನಲ್ಲಿ ಯಾವುದೇ ಸಾಲ ಮಾಡಿಲ್ಲ ಎಂದರೆ ಸರಿ. ನಮ್ಮ ತಂದೆಯ ಚಿಕಿತ್ಸೆಯನ್ನು ಅಟಲ್ ವಾಜಪೇಯಿ ಯೋಜನಾ ಅಡಿಯಲ್ಲಿ ಕೆರೂಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ನಮ್ಮ ತಂದೆಯ ಚಿಕಿತ್ಸೆಗಾಗಿ ಬೇರೆ ಸಾಲ ಮತ್ತು ನನ್ನ ವಿದ್ಯಾಭ್ಯಾಸಕ್ಕಾಗಿ ಬೇರೆ ಸಾಲ ಮಾಡಿರುತ್ತಾರೆ. ವಿದ್ಯಾರ್ಥಿ ಸಾಲ ಯೋಜನೆ ಅಡಿಯಲ್ಲಿ ನನ್ನ ವಿದ್ಯಾಬ್ಯಾಸಕ್ಕಾಗಿ ಸಾಲ ಪಡೆದಿರುವುದಿಲ್ಲ. ನನ್ನ ವಿದ್ಯಾಬ್ಯಾಸಕ್ಕಾಗಿ ಪ್ರತ್ಯೇಕ ಸಾಲ ಮಾಡಿದ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ.

2. ಹೊಲಗಳನ್ನು ನಮ್ಮ ತಾಯಿ ಬಿತ್ತುವುದು ಮತ್ತು ಬೆಳೆಯುವುದು ಮಾಡುತ್ತಾರೆ. ಒಂದು ಮನೆ ಇದ್ದು ಅದರಲ್ಲಿ ನಾವೇ ವಾಸ ಮಾಡುತ್ತೇವೆ ಎಂದರೆ ಸಾಕ್ಷಿಯು ಮನೆ ಬಿದ್ದಿರುತ್ತದೆ ಎನ್ನುತ್ತಾರೆ. ಬಿದ್ದ ಮನೆ ಹಾಗೆ ಇರುತ್ತದೆ ಅದನ್ನು ಕಟ್ಟಿಸಿರುವುದಿಲ್ಲ. ಅದಕ್ಕೆ ಸಂಬಂಧಿಸಿದಂತೆ ನಾವು ಸಾಲ ತೆಗೆದುಕೊಂಡಿರುವುದಿಲ್ಲ. ಜಮೀನುಗಳು ಫಲವತ್ತತೆ ಇರುವುದಿಲ್ಲ ಎಂದು ಭೂ-ವಿಜ್ಞಾನಿಗಳ ಹತ್ತಿರ ಪ್ರಮಾಣ ಪತ್ರ ಹಾಜರು ಪಡಿಸಿರುವುದಿಲ್ಲ. ಎ.ಸಿ ನ್ಯಾಯಾಲಯದಲ್ಲಿ ನಮ್ಮ ಅಜ್ಜಿ ಕೇಸು ಹಾಕಿದ್ದು ಅದರಲ್ಲಿ ಮನೆಯಿಂದ ಹೊರ ಹಾಕಬಾರದು ಎಂದು ಮಾತ್ರ ಕೇಳಿದ್ದು ಜೀವನಾಂಶ ಕೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಾನು, ನಮ್ಮ ತಾಯಿ ಮತ್ತು ನಮ್ಮ ಅಜ್ಜಿ ವಾರಸುದಾರರು ಎಂದರೆ ಸರಿ. ನಮ್ಮ ಅಜ್ಜಿಗೆ ವಯಸ್ಸಾಗಿದೆ ಎಂದರೆ ಸರಿ. ವಾದಿಗೆ ಸ್ವತಂತ್ರ ಓಡಾಡಲು ಮತ್ತು ಕೆಲಸ ಮಾಡಲು ಶಕ್ತಿ ಇಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಮಕ್ಕಳು ನಮ್ಮ ಕುಟುಂಬದ ವಂಶಾವಳಿಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳಾದ ಸಂಗಮೇಶ ಮತ್ತು ವಿರೇಶ ರವರು ಬೇರೆ ವಂಶದವರಾದರೂ ಸಹ ಅವರು ನಮ್ಮ ಮನೆಯಲ್ಲಿ

ಇರುತ್ತಾರೆ. ಅವರು ಹೊನ್ನಳ್ಳಿಯಲ್ಲಿ ನಮ್ಮ ಮನೆಯಲ್ಲಿದ್ದು ಅವರು ಈ ಕೋರ್ಟ್ ಕೇಸ್ ಆದ ನಂತರ ಬೇರೆ ಮನೆಯಲ್ಲಿ ಇರುತ್ತಾರೆ. ವಾದಿಯನ್ನು ಈಗ ಸದ್ಯ 2ನೇ ಪ್ರತಿವಾದಿಯ ಗಂಡ ಜೀವನ ನಿರ್ವಹಣೆ ಮಾಡುತ್ತಿದ್ದಾರೆ ಎಂದರೆ ಸರಿ. ಸಂಗಮೇಶ ಬೆಂಗಳೂರಿನಲ್ಲಿ ವಾಸವಿದ್ದು, ವಿರೇಶ ಮಾನ್ವಿಯಲ್ಲಿ ನೌಕರಿ ಮಾಡುತ್ತಿದ್ದು ಅಲ್ಲಿಯೇ ವಾಸವಿದ್ದು, ಚನ್ನವೀರಮ್ಮ ಲಿಂಗಸುಗೂರಿನ ಎಸ್.ಬಿ.ಹೆಚ್ ಬಡಾವಣೆಯ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಅಮರೇಶಪ್ಪ ಒಬ್ಬರೆ ಹೊನ್ನಳ್ಳಿಯಲ್ಲಿ ವಾದಿಯೊಂದಿಗೆ ಇದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ಟೈಲರಿಂಗ್ ಕೆಲಸ ಮಾಡುತ್ತಿದ್ದಾರೆ ಎಂದರೆ ಮೊದಲು ಮಾಡುತ್ತಿದ್ದಳು ಈಗ ಕಾಲು ನೋವು ಬಂದಿದ್ದರಿಂದ ಈಗ ಬಿಟ್ಟಿರುತ್ತಾರೆ. ಮನೆಯಲ್ಲಿ ಒಂದು ಸಣ್ಣ ಕಿರಾಣಿ ಅಂಗಡಿ ಇದೆ ಎಂದರೆ ಸರಿ. ಅದರಿಂದ ಉತ್ಪನ್ನ ಬರುತ್ತದೆ ಎಂದರೆ ಸರಿಯಲ್ಲ. ಆ ಪ್ರಕಾರ ಹೊಲ ಮನೆಯ ಆದಾಯವನ್ನು ನಾವೇ ಉಣ್ಣುತ್ತಿದ್ದೇವೆ ಎಂದರೆ ಸರಿ. ಆದರೆ ಈ ವರ್ಷ ಲಾಸ್ ಆಗಿದೆ ಎನ್ನುತ್ತಾರೆ. ಈ ವರ್ಷ ಮಳೆ-ಬೆಳೆ ಚೆನ್ನಾಗಿದ್ದು ಸಾಕಷ್ಟು ಆದಾಯ ಬಂದಿದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಮೃತ ಮಹಾಬಳೇಶ್ವರನ ಸ್ಥಾನದಲ್ಲಿದ್ದು ವಾದಿಯನ್ನು ನೋಡಿಕೊಳ್ಳುವ ಜವಾಬ್ದಾರಿ ಇದ್ದರೂ ಸಹ ಆದಾಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಅಮರೇಶ, ವಿರೇಶ ಮತ್ತು ಸಂಗಮೇಶ ರವರಿಗೆ ವಾದಿಯನ್ನು ನೋಡಿಕೊಳ್ಳುವ ಕಾನೂನು ಜವಾಬ್ದಾರಿ ಇಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.